

بِسۡمِ اللّٰہِ الرَّحۡمٰنِ الرَّحِیۡمِ

# ಮಸ್ಜಿದ್ ಮುಬಾರಕ್ – ಇಸ್ಲಾಮಾಬಾದ್, ಯು.ಕೆ.

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ 17-05-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಖುರ್‌ಆನ್ ವಚನ ತಿಲಾವತ್ ಮಾಡಿದರು:*

قُلۡ اَمَرَ رَبِّیۡ بِالۡقِسۡطِ ۟ وَ اَقِیۡمُوۡا وُجُوۡہَکُمۡ عِنۡدَ کُلِّ مَسۡجِدٍ وَّ ادۡعُوۡہُ مُخۡلِصِیۡنَ لَہُ الدِّیۡنَ ۬ؕ کَمَا بَدَاَکُمۡ تَعُوۡدُوۡنَ ﴿۳۰﴾ فَرِیۡقًا ہَدٰی وَ فَرِیۡقًا حَقَّ عَلَیۡہِمُ الضَّلٰلَۃُ ؕ اِنَّہُمُ اتَّخَذُوا الشَّیٰطِیۡنَ اَوۡلِیَآءَ مِنۡ دُوۡنِ اللّٰہِ وَ یَحۡسَبُوۡنَ اَنَّہُمۡ مُّہۡتَدُوۡنَ ﴿۳۱﴾ یٰبَنِیۡۤ اٰدَمَ خُذُوۡا زِیۡنَتَکُمۡ عِنۡدَ کُلِّ مَسۡجِدٍ وَّ کُلُوۡا وَ اشۡرَبُوۡا وَ لَا تُسۡرِفُوۡا ۚ اِنَّہٗ لَا یُحِبُّ الۡمُسۡرِفِیۡنَ ﴿۳۲﴾

ಹೇಳು: ನ್ಯಾಯಪಾಲನೆಯನ್ನು ನನ್ನ ಪ್ರಭು ಆದೇಶಿಸಿದ್ದಾನೆ. ಪ್ರತಿಯೊಂದು ಆರಾಧನೆಯ (ಸಂದರ್ಭದಲ್ಲೂ) ಸ್ಥಳದಲ್ಲೂ ನಿಮ್ಮ ಮುಖಗಳನ್ನು (ಅಲ್ಲಾಹನೆಡೆಗೆ) ತಿರುಗಿಸಿರಿ. ಧರ್ಮದ ವಿಚಾರದಲ್ಲಿ ಅವನಿಗೆ ಪೂರ್ಣ ವಿಧೇಯರಾಗಿದ್ದುಕೊಂಡು ಅವನನ್ನು ಕರೆದು ಪ್ರಾರ್ಥಿಸಿರಿ. ನಿಮ್ಮನ್ನು ಅವನು ಮುಂಚೆ ಸೃಷ್ಟಿಸಿದಂತೆಯೇ ಅವನೆಡೆಗೆ ನೀವು ಮರಳುವಿರಿ. ಕೆಲವರನ್ನು ಅವನು ಸತ್ಪಥದಲ್ಲಿ ನಡೆಸಿದನು. ಬೇರೆ ಕೆಲವರು ದುರ್ಮಾರ್ಗಕ್ಕೆ ಅರ್ಹರಾದರು. ಖಂಡಿತವಾಗಿಯೂ ಅವರು ಅಲ್ಲಾಹನನ್ನು ಬಿಟ್ಟು ಶೈತಾನ್‌ಗಳನ್ನು ಮಿತ್ರರನ್ನಾಗಿ ಮಾಡಿರುವರು. ಆದರೂ ತಾವೇ ಸನ್ಮಾರ್ಗದಲ್ಲಿ ಚಲಿಸುವವರೆಂದು ಅವರು ಭಾವಿಸುತ್ತಾರೆ. ಎಲೈ ಆದಂ ಸಂತತಿಗಳೇ, ನಿಮ್ಮ ಆರಾಧನೆಯ ಪ್ರತಿಯೊಂದು (ಸಮಯದಲ್ಲೂ) ಸ್ಥಳದಲ್ಲೂ ನಿಮ್ಮ ಅಲಂಕಾರದ ಬಗ್ಗೆ ಗಮನವಿಡಿರಿ. ನೀವು ತಿನ್ನಿರಿ, ಕುಡಿಯಿರಿ; ಆದರೆ ಮಿತಿ ಮೀರಬೇಡಿರಿ. ಮಿತಿಮೀರುವವರನ್ನು ಅವನು (ಅಲ್ಲಾಹನು) ಖಂಡಿತವಾಗಿಯೂ ಇಷ್ಟಪಡುವುದಿಲ್ಲ. (ಪವಿತ್ರ ಖುರ್‌ಆನ್ 7: 30–32).

ಅಲ್‌ಹಮ್‌ದುಲಿಲ್ಲಾಹ್, ಇಸ್ಲಾಮಾಬಾದ್‌ನಲ್ಲಿ ನಿರ್ಮಿಸಲ್ಪಟ್ಟಿರುವ ಈ ಮಸ್‌ಜಿದ್‌ನಲ್ಲಿ ಇಂದು ಜುಮುಅ ನಮಾಝ್ ನಿರ್ವಹಿಸುವ ಭಾಗ್ಯವನ್ನು ಅಲ್ಲಾಹನು ನಮಗೆ ನೀಡಿದ್ದಾನೆ. ಇಂದಿನ ಈ ಜುಮುಅ ನಮಾಝ್‌ನೊಂದಿಗೆ ನಾವು ಈ ಮಸ್‌ಜಿದನ್ನು ಔಪಚಾರಿಕವಾಗಿ ಉದ್ಘಾಟಿಸುತ್ತಿದ್ದೇವೆ. ಆದರೆ ನಾನು ನನ್ನ ವಾಸ್ತವ್ಯವನ್ನು ಇಲ್ಲಿಗೆ ವರ್ಗಾಯಿಸಿದಾಗಲೇ ಇಲ್ಲಿ ನಮಾಝ್‌ಗಳು ಮತ್ತು ಇತರ ಕಾರ್ಯಕ್ರಮಗಳು ಪ್ರಾರಂಭವಾಗಿದ್ದುವು. ಅಲ್ಲಾಹನ ಅನುಗ್ರಹದಿಂದ ಕಳೆದ ಹತ್ತು ಹದಿನೈದು ವರ್ಷಗಳಲ್ಲಿ ಯು.ಕೆ.ಯಲ್ಲೂ ಲೋಕದ ವಿವಿಧ ದೇಶಗಳಲ್ಲೂ ನಮ್ಮ ಜಮಾಅತ್ ಮಸ್‌ಜಿದ್‌ಗಳನ್ನು ನಿರ್ಮಿಸುವ ಬಗ್ಗೆ ವಿಶಿಷ್ಟವಾಗಿ ಲಕ್ಷ್ಯ ನೀಡುತ್ತಾ ಇದೆ. ಈ ಮಸ್‌ಜಿದ್‌ಗೆ ನಾನು **ಮಸ್‌ಜಿದ್ ಮುಬಾರಕ್** ಎಂದು ಹೆಸರಿಸಿದ್ದೇನೆ. ಈ ಮಸ್‌ಜಿದ್‌ನ ಮಹತ್ವವೇನೆಂದರೆ ಖಲೀಫರ ವಾಸಸ್ಥಳ ಇಲ್ಲಿದೆ. ಜಮಾಅತಿಗೆ ಸೇವೆ ಮಾಡುವ ಕೆಲವರ ವಾಸಸ್ಥಳ ಸಹ ಇಲ್ಲಿದೆ. ಪ್ರತಿದಿನ ನಾನು ಹೆಚ್ಚಿಗೆ ಸಂಬಂಧವಿರಿಸುವ ಕಚೇರಿಗಳೂ ಇಲ್ಲಿವೆ. ಈ ಸ್ಥಳ ಮತ್ತು ಈ ಮಸ್‌ಜಿದ್ ಈ ಕಾರಣಗಳಿಂದ ಕೇಂದ್ರೀಯ ಮಸ್‌ಜಿದ್ ಎಂಬ ಮಹತ್ವ ಹೊಂದಿದೆ. ಅಲ್ಲಾಹನು ಈ ಮಸ್‌ಜಿದನ್ನು ಮಸ್‌ಜಿದ್ ಮುಬಾರಕ್‌ಗೆ ಹೋಲಿಕೆಯಿರುವುದನ್ನಾಗಿ ಮಾಡಲಿ. ಅಲ್ಲಾಹನ ಅನುಗ್ರಹಗಳನ್ನು ಹೀರಿಕೊಳ್ಳುವಂತಹದೂ ಎಲ್ಲ ರೀತಿಗಳಲ್ಲೂ ಶುಭದಾಯಕವೂ ಆಗಲಿ. ಈ ಮಸ್‌ಜಿದ್‌ಗೆ ಹೆಸರಿಡುವ ಪ್ರಸ್ತಾಪ ಬಂದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವತೀರ್ಣಗೊಂಡ ಒಂದು ಇಲ್‌ಹಾಮ್ ತಕ್ಷಣ ನನ್ನೆದುರಿಗೆ ಬಂದಿತು. ಆ ಕಾರಣದಿಂದ ಈ ಹೆಸರು ಮಸ್‌ಜಿದ್‌ಗೆ ನೀಡಲಾಯಿತು. ಆ ಇಲ್‌ಹಾಮ್ ಹೀಗಿದೆ: **ಮುಬಾರಕುನ್ ವ ಮುಬಾರಿಕುನ್ ವ ಕುಲ್ಲು ಅಮ್‌ರಿನ್ ಮುಬಾರಕಿನ್ ಯಜ್‌ಅಲು ಫೀಹಿ.** ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಇಲ್‌ಹಾಮನ್ನು ಹೀಗೆ ಭಾಷಾಂತರಿಸಿದ್ದಾರೆ. ಈ ಮಸ್‌ಜಿದ್ ಅನುಗ್ರಹದಾಯಕವಾಗಿದೆ. ಇದು ಅನುಗ್ರಹ ಗಳಿಸಿದ ಮಸ್‌ಜಿದ್ ಸಹ ಆಗಿದೆ. ಪ್ರತಿಯೊಂದು ಅನುಗ್ರಹೀತ ಕರ್ಮ ಇದರಲ್ಲಿ ಮಾಡಲ್ಪಡುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಖಾದಿಯಾನಿನ ಮಸ್‌ಜಿದ್ ಮುಬಾರಕ್‌ನಲ್ಲಿ ಮಾಡಿದ ಪ್ರಾರ್ಥನೆಗಳು ಲೋಕದಲ್ಲಿ ಇಸ್ಲಾಮ್ ಹಬ್ಬಬೇಕೆಂಬ ಮತ್ತು ಜಯಗಳಿಸಬೇಕೆಂದು ಅವರಿಗಿದ್ದ ಅಭಿಲಾಷೆ ಮತ್ತು ಬೇಗುದಿಯ ಪರಿಣಾಮಗಳು ಈ ಮಸ್‌ಜಿದ್‌ಗೂ ತಲಪುತ್ತಾ ಇರಲಿ. ಇಲ್ಲಿ ನಮ್ಮ ಜಮಾಅತಿನ ಮರ್‌ಕಝ್ ಸ್ಥಾಪಿಸಲ್ಪಟ್ಟಿರುವುದು ಎಲ್ಲ ರೀತಿಗಳಲ್ಲೂ ಶುಭಕರವಾಗಲಿ. ಅಹ್ಮದಿಯಾ ಖಿಲಾಫತ್ ವತಿಯಿಂದ ಜಾರಿಗೊಳ್ಳುವ ಎಲ್ಲ ಯೋಜನೆಗಳು ಯಾವಾಗಲೂ ಅಲ್ಲಾಹನ ಅನುಗ್ರಹವನ್ನು ಗಳಿಸುತ್ತಾ ಇರಲಿ. ಅಲ್ಲಾಹನ ದೃಷ್ಟಿಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಸ್‌ಜಿದ್‌ಗೆ ಯಾವ ಅನುಗ್ರಹಗಳೊಂದಿಗೆ ಸಂಬಂಧವಿದ್ದಿತೋ ಆ ಅನುಗ್ರಹಗಳು ಈ ಮಸ್‌ಜಿದ್‌ಗೂ ಲಭಿಸುತ್ತಾ ಇರಲಿ. ಅಲ್ಲಾಹನು ನಮಗೆ ನೀಡಿದ ವೈಶಾಲ್ಯತೆಗಳನ್ನು ಇನ್ನಷ್ಟು ವರ್ಧಿಸುತ್ತಾ ಇರಲಿ. ಶತ್ರುಗಳು ತಮ್ಮ ಯೋಚನೆಗಳ ಪ್ರಕಾರ ಯಾವ ಅನುಗ್ರಹಗಳನ್ನು ನಮ್ಮಿಂದ ಕಿತ್ತುಕೊಳ್ಳಲು ಇಚ್ಛಿಸಿದರೋ ಅಲ್ಲಾಹನು ಅವುಗಳನ್ನು ಹಿಂದಿನ ಕಾಲಕ್ಕಿಂತ ಮಿಗಿಲಾಗಿ ಅನೇಕ ಪಟ್ಟು ವರ್ಧಿಸಿ ಈ ಮಸ್‌ಜಿದ್ ಮತ್ತು ಮರ್‌ಕಝ್‌ಗಳ ಸ್ಥಾಪನೆ ಮೂಲಕ ಪ್ರಕಟಪಡಿಸುವ ದೃಶ್ಯ ಕಾಣುವಂತಾಗಲಿ.

ಅಹ್ಮದಿಯಾ ಜಮಾಅತಿನ ಅಭಿವೃದ್ಧಿ ಅಲ್ಲಾಹನ ಅನುಗ್ರಹಗಳಿಂದ ಉಂಟಾಗುವುದಾಗಿದೆ. ಎಲ್ಲಿಯವರೆಗೆ ನಾವು ಅಲ್ಲಾಹನ ಆಜ್ಞೆಗಳ ಪ್ರಕಾರ ನಡೆದುಕೊಂಡು ಅಲ್ಲಾಹನ ಸಂಪ್ರೀತಿ ಗಳಿಸಲು ಶ್ರಮಿಸುವೆವೋ, ನಾವು ಅಲ್ಲಾಹನ ಅನುಗ್ರಹಗಳ ವಾರೀಸುದಾರರಾಗಿ ಆ ಅಭಿವೃದ್ಧಿಯಲ್ಲಿ

ಭಾಗಿಗಳಾಗುವ ಭಾಗ್ಯ ಪಡೆಯುವೆವು. ಆದುದರಿಂದ ನಾವು ನಮ್ಮ ಸ್ಥಿತಿಯ ಬಗ್ಗೆ ಪರಿಶೋಧಿಸುತ್ತಾ ಇರುವುದು ಆವಶ್ಯಕವಾಗಿದೆ. ಈ ಹೊಸ ವಾಸ ಸ್ಥಳದಲ್ಲಿ ಇರಲು ಅಲ್ಲಾಹನು ಯಾರಿಗೆಲ್ಲ ಭಾಗ್ಯ ನೀಡಿರುವನೋ ಅವರು ಮತ್ತು ಈ ಪ್ರದೇಶದ ಸಮೀಪ ವಾಸಿಸಲು ತೊಡಗುತ್ತಾ ಇರುವವರು ತಮ್ಮ ಸ್ಥಿತಿಯನ್ನು ಹೇಗೆ ಸುಧಾರಣೆ ಮಾಡಲು ಪ್ರಯತ್ನಿಸಬೇಕೆಂದರೆ ಈ ಪ್ರದೇಶದಲ್ಲಿ ಅಹ್ಮದಿಯ್ಯತ್ ಮತ್ತು ಇಸ್ಲಾಮಿನ ವಾಸ್ತವಿಕ ಚಿತ್ರ ಜನರಿಗೆ ಕಾಣಿಸುವಂತೆ ಆಗಬೇಕು. ಇಲ್ಲಿನ ನಿವಾಸಿಗಳಿಗೆ ಒಂದು ಹೊಸ ರೂಪ ಲಭಿಸಿದೆ. ಇಲ್ಲಿ ಸ್ಥಳೀಯ ನಿವಾಸಿಗಳು ಸಹ ನಮ್ಮನ್ನು ಬೇರೆ ಒಂದು ದೃಷ್ಟಿಯಲ್ಲಿ ವೀಕ್ಷಿಸುವರು. ಈ ಕಾರಣದಿಂದ ನೀವು ನಿಮ್ಮ ಉತ್ತಮ ಮಾದರಿಯನ್ನು ಮೊದಲಿಗಿಂತ ಹೆಚ್ಚು ಉತ್ತಮ ಮಟ್ಟದಲ್ಲಿ ಪ್ರಕಟಿಸಬೇಕಾಗಿದೆ. ನೀವು ಇಲ್ಲಿನ ನಿವಾಸಿಗಳ ಮೇಲೆ ನಿಮ್ಮ ಉತ್ತಮ ಪ್ರಭಾವ ಬೀರಬೇಕಾದುದು ಆವಶ್ಯಕವಾಗಿದೆ.

ನಾನು ಪಠಿಸಿದ ಪವಿತ್ರ ಖುರ್‌ಆನ್ ವಚನಗಳಲ್ಲಿ ಅಲ್ಲಾಹನು ಸತ್ಯವಿಶ್ವಾಸಿಗಳೊಂದಿಗೆ ಸ್ಪಷ್ಟವಾಗಿ ಹೇಳಿದ್ದಾನೆ. ನೀವು ಅಲ್ಲಾಹನ ಸಂಪ್ರೀತಿಯನ್ನು ಆಶಿಸುತ್ತಿರುವಿರಾದರೆ ನೀವು ನಿಮ್ಮ ಧರ್ಮವನ್ನು ಅಲ್ಲಾಹನಿಗೋಸ್ಕರ ಪೂರ್ಣ ವಿಧೇಯತ್ವದೊಂದಿಗೆ ಅನುಷ್ಠಿಸಿರಿ. ಹೀಗೆ ಮಾಡದಿದ್ದರೆ ನಿಮಗೆ ಅಭಿವೃದ್ಧಿ ಲಭಿಸಲಾರದು. ಅದಕ್ಕೆ ಬದಲಾಗಿ ಪಥಭ್ರಷ್ಟತೆಯ ಹೊಂಡಕ್ಕೆ ಬೀಳುವಿರಿ. ಮಸ್‌ಜಿದ್‌ಗಳ ನಿರ್ಮಾಣದ ಉದ್ದೇಶವನ್ನು ಈಡೇರಿಸಬೇಕು ಹಾಗೆ ಮಾಡಿದರೆ ಮಾತ್ರ ಅಲ್ಲಾಹನ ಬಹುಮಾನ ಲಭಿಸುವುದು. ಇಂದಿನ ಕಾಲದಲ್ಲಿ ಅಹ್ಮದಿಯ್ಯತ್ತಿನ ಶತ್ರುಗಳು ತಮ್ಮ ದೌರ್ಜನ್ಯ, ಅತಿರೇಕ ವರ್ತನೆ ಮತ್ತು ಬೈಗಳಲ್ಲಿ ಮಿತಿಮೀರುತ್ತಾ ಇರುವಾಗ ನಮ್ಮ ಹೊಣೆಗಾರಿಕೆಗಳು ಹೆಚ್ಚು ವರ್ಧಿಸಿವೆ. ನಾವು ನಮ್ಮ ಆರಾಧನೆಗಳನ್ನು ನಿಷ್ಠಾಪೂರ್ಣವಾಗಿ ನಿರ್ವಹಿಸಬೇಕು. ಮತ್ತು ಇಸ್ಲಾಮಿನ ವಾಸ್ತವಿಕ ಉಪದೇಶಗಳನ್ನು ಲೋಕಕ್ಕೆ ತಿಳಿಸಿಕೊಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: “ಪವಿತ್ರ ಖುರ್‌ಆನ್‌ನಲ್ಲಿ **ಉದ್‌ಊಹು ಮುಖ್‌ಲಿಸೀನ ಲಹುದ್ದೀನ್** ಎಂದು ಉಪದೇಶಿಸಲಾಗಿದೆ – ಧರ್ಮದ ವಿಚಾರದಲ್ಲಿ ಅಲ್ಲಾಹನಿಗೆ ಪೂರ್ಣ ವಿಧೇಯರಾಗಿದ್ದುಕೊಂಡು ಅವನನ್ನು ಕರೆದು ಪ್ರಾರ್ಥಿಸಿರಿ. ಅಲ್ಲಾಹನನ್ನು ನಿಷ್ಠೆಯಿಂದ ನೆನಪಿಸಬೇಕಾಗಿದೆ. ಅವನು ನೀಡಿದ ಅನುಗ್ರಹಗಳ ಅಧ್ಯಯನ ಮಾಡಬೇಕಾಗಿದೆ. ಆರಾಧನೆಯ ತತ್ವದ ಸಾರಾಂಶ ವಾಸ್ತವಿಕವಾಗಿ ಹೀಗಿದೆ: ಅಲ್ಲಾಹನ ಮುಂದೆ ಹೇಗೆ ನಿಲ್ಲಬೇಕೆಂದರೆ ಅಲ್ಲಾಹನನ್ನು ನೋಡುತ್ತಿರುವೆನೋ ಎಂಬಂತೆ. ಅಥವಾ ಅಲ್ಲಾಹನು ತನನ್ನು ನೋಡುತ್ತಿದ್ದಾನೆ ಎಂಬಂತೆ. ಪ್ರತಿಯೊಂದು ರೀತಿಯ ಮಾಲಿನ್ಯ, ಪ್ರತಿಯೊಂದು ರೀತಿಯ ಶಿರ್ಕ್ ಮೊದಲಾದುವುಗಳಿಂದ ಮುಕ್ತನಾಗಬೇಕು. ಅಲ್ಲಾಹನ ಮಹೋನ್ನತ ಸ್ಥಾನ ಮತ್ತು ಅವನ ಪರಿಪಾಲನೆ ಬಗ್ಗೆ ಯೋಚಿಸಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದುಆಗಳನ್ನು ಮತ್ತು ಇತರ ದುಆಗಳನ್ನು ಬಹಳ ಹೆಚ್ಚಾಗಿ ಮಾಡುತ್ತಾ ಇರಬೇಕು. ಬಹಳ ಇಸ್ತಿಗ್‌ಫಾರ್ ಮತ್ತು ತೌಬದ ಪ್ರಾರ್ಥನೆಗಳನ್ನು ಮಾಡಬೇಕು. ಪದೇ ಪದೇ ಅಲ್ಲಾಹನ ಮುಂದೆ ನಿಮ್ಮ ಬಲಹೀನತೆಗಳನ್ನು ನಿವೇದಿಸಬೇಕು. ಆ ಮೂಲಕ ಆತ್ಮದ ಪರಿಶುದ್ಧಿ ಆಗುತ್ತದೆ. ಅಲ್ಲಾಹನೊಂದಿಗೆ ವಾಸ್ತವಿಕ ಸಂಬಂಧ ಸ್ಥಾಪಿತವಾಗುತ್ತದೆ. ಅಲ್ಲಾಹನ ಬಗ್ಗೆ ಪ್ರೀತಿಯಲ್ಲಿ ತಲ್ಲೀನವಾಗಬೇಕು.

ಮತ್ತೊಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇಂದಿನ ಕಾಲದಲ್ಲಿ ಇಸ್ಲಾಮ್ ಎಂಬುದರ ಅರ್ಥದಲ್ಲಿ ವ್ಯತ್ಯಾಸ ತಲೆದೋರಿದೆ. ಎಲ್ಲ ವಿಧಗಳ ದುರ್ಗುಣಗಳು ಅದರಲ್ಲಿ ತುಂಬಿವೆ. **ಮುಖ್‌ಲಿಸೀನ ಲಹುದ್ದೀನ್** ಎಂಬ ಪವಿತ್ರ ಖುರ್‌ಆನ್ ವಚನದಲ್ಲಿ ಯಾವ ಇಖ್‌ಲಾಸ್ ಬಗ್ಗೆ ಹೇಳಲಾಗಿದೆಯೋ ಅದು ಆಕಾಶಕ್ಕೆ ಏರಿ ಹೋಗಿದೆ. ಅದರ ಅಸ್ತಿತ್ವದ ಯಾವ ಕುರುಹೂ ಕಾಣಿಸುವುದಿಲ್ಲ. ಅಲ್ಲಾಹನೊಂದಿಗೆ ಸತ್ಯಸಂಧವಾದ ನಿಷ್ಠೆ, ಪ್ರೀತಿ, ಅಲ್ಲಾಹನ ಬಗ್ಗೆ ಭರವಸೆ ಸಂಪೂರ್ಣವಾಗಿ ನಿರ್ನಾಮವಾಗಿದೆ. ಈ ಸದ್ಗುಣಗಳನ್ನು ಪುನಃ ಜೀವಂತಗೊಳಿಸಬೇಕು ಎಂದು ಈಗ ಅಲ್ಲಾಹನು ನಿರ್ಧರಿಸಿದ್ದಾನೆ. ಈ ಕಾಲಘಟ್ಟದಲ್ಲಿ ತೋರಿಕೆಯ ವರ್ತನೆ, ದುರಹಂಕಾರ, ಸ್ವೇಚ್ಛಾಚಾರ ಅಹಂಭಾವ, ಹೆಮ್ಮೆ, ಬಡಾಯಿ ಕೊಚ್ಚಿಕೊಳ್ಳುವುದು ಮೊದಲಾದ ದುರ್ಗುಣಗಳು ವರ್ಧಿಸಿವೆ. ಅಲ್ಲಾಹನ ಬಗ್ಗೆ ಭರವಸೆ, ಅವನಿಗೆ ತೀರ್ಮಾನ ವಹಿಸಿ ಕೊಡುವುದು ಮೊದಲಾದುವು ನಿಶ್ಶೇಷವಾಗಿವೆ. ಈಗ ಅಲ್ಲಾಹನು ಸದ್ಗುಣಗಳ ಬೀಜಬಿತ್ತಲು ನಿರ್ಧರಿಸಿದ್ದಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಈ ಬೀಜ ಬಿತ್ತಲಾಯಿತು. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಸದ್ಗುಣಗಳನ್ನು ಜೀವಂತಗೊಳಿಸುವ ಮತ್ತು ಆರಾಧನೆಗಳನ್ನು ನಿಷ್ಠೆಯಿಂದ ನಿರ್ವಹಿಸುವಂತೆ ಮಾಡುವ ತನ್ನ ನಿರ್ಧಾರವನ್ನು ಪ್ರಕಟಿಸಿದನು. ಈ ಬೀಜ ಬಿತ್ತನೆ ಮೂಲಕ ಬೆಳೆದ ಗಿಡಗಳಾಗಿ ಮತ್ತು ಮರಗಳ ಶಾಖೆಗಳಾಗಿ ನಾವು ನಮ್ಮನ್ನು ಪರಿವರ್ತಿಸಬೇಕು. ನಾವು ನಮ್ಮ ಆರಾಧನೆಗಳನ್ನು ಅಲ್ಲಾಹನಿಗೋಸ್ಕರ ವಿಧೇಯತೆಯಿಂದ ನಿರ್ವಹಿಸುವಾಗ ಇದು ಸಾಧ್ಯವಾಗುತ್ತದೆ. ಅನ್ಯರ ಬಲಹೀನತೆಗಳನ್ನು ನೋಡಿ ನಿಮ್ಮನ್ನು ಸುಧಾರಣೆ ಮಾಡಲು ಪ್ರಯತ್ನಿಸಿರಿ. ಅಲ್ಲಾಹನ ಪ್ರೀತಿಯನ್ನು ಗಳಿಸುವುದಕ್ಕೆ ಇತರ ವಿಷಯಗಳ ಮೇಲೆ ಆದ್ಯತೆ ನೀಡಿರಿ.

ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಕರ್ಮಗಳಿಗೆ ನಿಷ್ಠೆಯು ಶರತ್ತಾಗಿದೆ. ಕೇವಲ ಬಾಹ್ಯ ಕರ್ಮಗಳಿದ್ದು ಅದರಲ್ಲಿ ನಿಷ್ಠೆಯಿರದಿದ್ದರೆ, ಅಲ್ಲಾಹನ ಸಂಪ್ರೀತಿ ಗಳಿಸುವ ಬೇಗುದಿ ಇಲ್ಲದಿದ್ದರೆ ಅಂತಹ ಕರ್ಮವು ನಿರರ್ಥಕವಾಗಿದೆ. ಮತ್ತೊಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನ ಪ್ರಾಕೃತಿಕ ಅವಸ್ಥೆಗೆ ಅವನ ನೈತಿಕ ಮತ್ತು ಆಧ್ಯಾತ್ಮಿಕ ಅವಸ್ಥೆಯೊಂದಿಗೆ ಸುದೃಢವಾದ ಸಂಬಂಧವಿದೆಯೆಂದು ಪವಿತ್ರ ಖುರ್‌ಆನ್‌ನಿಂದ ತಿಳಿಯುತ್ತದೆ. ಎಷ್ಟರ ಮಟ್ಟಗೆ ಇದೆ ಎಂದರೆ ಆಹಾರ ಪಾನೀಯಗಳನ್ನು ಉಪಯೋಗಿಸುವ ವಿಧಾನಗಳು ಸಹ ಅವನ ನೈತಿಕ ಮತ್ತು ಆಧ್ಯಾತ್ಮಿಕ ಗುಣಗಳ ಮೇಲೆ ಪ್ರಭಾವ ಬೀರುತ್ತವೆ. ಮನುಷ್ಯನ ಸಹಜ ಗುಣಗಳನ್ನು ಶರೀಅತಿನ ಮಾರ್ಗದರ್ಶನಗಳಿಗೆ ಅನುಸಾರವಾಗಿ ಉಪಯೋಗಿಸುವುದಾದರೆ ಉಪ್ಪಿನ ಗಣಿಯಲ್ಲಿ ಬಿದ್ದ ಪ್ರತಿಯೊಂದು ವಸ್ತು ಉಪ್ಪೇ ಆಗುವ ಹಾಗೆ ಅವು ಸಹ ನೈತಿಕ ಗುಣಗಳಾಗಿ ಪರಿವರ್ತಿತವಾಗುತ್ತವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿದರು: ಆಹಾರ ಪದಾರ್ಥಗಳು ಸಹ ಮನುಷ್ಯನ ಆಧ್ಯಾತ್ಮಿಕ ಸ್ಥಿತಿಯನ್ನು ಉತ್ತಮಪಡಿಸಲು ಪ್ರಭಾವ ಬೀರುತ್ತವೆ. ಆದುದರಿಂದ ಸಂತುಲಿತವಾದ ಆಹಾರ ತಿನ್ನಬೇಕು. ಸಂತುಲಿತ ಆಹಾರದಿಂದ ಮನುಷ್ಯನ ಗುಣಗಳು ಸಹ ಸಂತುಲಿತವಾಗುತ್ತವೆ ಮತ್ತು ಅಲ್ಲಾಹನನ್ನು ಆರಾಧಿಸುವ ಬಗ್ಗೆ ಶ್ರದ್ಧೆ ಇರುತ್ತದೆ. ಅಲ್ಲಾಹನು ಹೇಳುತ್ತಾನೆ, **ಕುಲೂ ವಶ್‌ರಬೂ ವಲಾ ತುಸ್‌ರಿಫೂ** ನೀವು ತಿನ್ನಿರಿ ಕುಡಿಯಿರಿ ಆದರೆ ಮಿತಿಮೀರಬೇಡಿರಿ. (ಪವಿತ್ರ ಖುರ್‌ಆನ್ 7: 32). ಮಿತಿಮೀರಿದ ಆಹಾರದ ಬಳಕೆಯಿಂದ ಸಮತೋಲನ ಬಿಗಡಾಯಿಸುತ್ತದೆ ಮತ್ತು ಅದು ಆಧ್ಯಾತ್ಮಿಕ ಸ್ಥಿತಿಯ ಮೇಲೆ ಸಹ ದುಷ್ಪರಿಣಾಮ ಬೀರುತ್ತದೆ. ಆದುದರಿಂದ ಅಲ್ಲಾಹನನ್ನು ನಿಷ್ಠೆಯಿಂದ ಆರಾಧಿಸುವ ಆರಾಧಕನು ತನ್ನ ಆಧ್ಯಾತ್ಮಿಕ ಸ್ಥಿತಿಯನ್ನು ಉತ್ತಮ ಪಡಿಸುತ್ತಾನೆ. ಅಲ್ಲಾಹನೊಂದಿಗೆ ಸಂಬಂಧ ಹೊಂದುವುದರಲ್ಲಿ ಮುನ್ನಡೆಯುವುದರೊಂದಿಗೆ ತನ್ನ ಶಾರೀರಿಕ ಸ್ಥಿತಿಯನ್ನೂ ಸರಿಪಡಿಸುತ್ತಾನೆ. ಅಲ್ಲಾಹನು ನೀಡಿದ ಅನುಗ್ರಹಗಳನ್ನು ಅಲ್ಲಾಹನ ಸಂಪ್ರೀತಿ ಗಳಿಸಲು ಬಳಸುತ್ತಾನೆ.

ಈ ಕೇಂದ್ರದ ಸ್ಥಾಪನೆಯ ನಂತರ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವ ನಮ್ಮ ಕರ್ತವ್ಯಗಳನ್ನು ಈಡೇರಿಸಲು ನಾವು ನಮ್ಮ ಆರಾಧನೆಗಳ ಮಟ್ಟವನ್ನು ಉನ್ನತೀಕರಿಸಬೇಕು ಅದರೊಂದಿಗೆ ನಮ್ಮ ಸ್ವಭಾವಗುಣಗಳ ಮಟ್ಟವನ್ನೂ ಉನ್ನತಗೊಳಿಸಬೇಕು. ಈಗಿನ ವಿಶಿಷ್ಟ ಪರಿಸ್ಥಿತಿಯಲ್ಲಿ ಇಲ್ಲಿ ವಾಸಿಸುವ ಇತರ ಜನರು ನಮ್ಮ ಮೇಲೆ ಹೊಸ ದೃಷ್ಟಿಕೋನದಿಂದ ವೀಕ್ಷಿಸುವರು. ನಾವು ನಮ್ಮ ನಡೆನುಡಿಗಳಲ್ಲಿ ಇಸ್ಲಾಮಿನ ಸುಂದರ ತತ್ವಗಳ ಸ್ವರೂಪವನ್ನು ಪ್ರದರ್ಶಿಸುವುದು ಹಿಂದಿಗಿಂತ ಈಗ ಹೆಚ್ಚು ಆವಶ್ಯಕವಾಗಿದೆ. ನಾವು ಇವುಗಳ ಬಗ್ಗೆ ಶ್ರದ್ಧೆವಹಿಸಿ ಇಲ್ಲಿ ಜೀವಿಸುವುದಾದರೆ ಅದು ತಬ್ಲೀಗ್ ಮಾಡುವ ಬಹಳ ದೊಡ್ಡ ಮಾರ್ಗವಾಗುವುದು. ಅದು ನಮ್ಮನ್ನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವವರನ್ನಾಗಿ ಮಾಡಿ ಅವನ ಅನುಗ್ರಹಗಳನ್ನು ಗಳಿಸುವವರನ್ನಾಗಿ ಮಾಡುವುದು.

ಒಂದು ವಿಷಯ ನೆನಪಿಡಬೇಕಾಗಿದೆ. ಕೆಲವರು ತಮ್ಮ ನೆರೆಹೊರೆಯವರೊಂದಿಗೆ ಮತ್ತು ಹೊರಗೆ ಭೇಟಿಯಾಗುವವರೊಂದಿಗೆ ಬಹಳ ಚೆನ್ನಾಗಿ ವರ್ತಿಸುವವರಾಗಿರುತ್ತಾರೆ. ಆದರೆ ಮನೆಯಲ್ಲಿ ತಮ್ಮ ಪತ್ನಿ ಮತ್ತು ಮಕ್ಕಳೊಂದಿಗೆ ಅವರ ವರ್ತನೆ ಒಳ್ಳೆಯದಾಗಿರುವುದಿಲ್ಲ. ಇದು ಅವರ ವೈಯ್ಯಕ್ತಿಕ ವಿಷಯವಲ್ಲ, ಏಕೆಂದರೆ ಇಂತಹ ವರ್ತನೆ ಜಮಾಅತಿನ ಐಕ್ಯತೆ ಮತ್ತು ಶಾಂತಿಯ ಮೇಲೆ ಪ್ರಭಾವ ಬೀರುತ್ತವೆ. ಮನೆಯ ಕಲಹಗಳು ಮಕ್ಕಳ ಮೇಲೆ ಪ್ರಭಾವ ಬೀರುತ್ತವೆ. ಅಂತಹ ಮಕ್ಕಳು ಜಮಾಅತಿನ ಅತ್ಯುತ್ತಮ ಭಾಗವಾಗುವುದಕ್ಕೆ ಬದಲಾಗಿ ಜಮಾಅತಿನಿಂದಲೂ ದೀನ್‌ನಿಂದಲೂ ದೂರ ಸರಿಯುತ್ತಾರೆ. ಇಸ್ಲಾಮನ್ನು ಹರಡುವುದು ಮತ್ತು ದೀನನ್ನು ಅಲ್ಲಾಹನಿಗೋಸ್ಕರ ಅನುಷ್ಠಿಸುವುದು ಆವಶ್ಯಕವಾಗಿದೆ. ಆ ಮೂಲಕ ಮುಂದಿನ ಪೀಳಿಗೆಯನ್ನು ಸಂರಕ್ಷಿಸಬಹುದಾಗಿದೆ. ಅಂತಹ ಮನೆಗಳಲ್ಲಿ ಶಾಂತಿಯನ್ನೂ ನೆಮ್ಮದಿಯನ್ನೂ ಸ್ಥಾಪಿಸಲು ಪ್ರಯತ್ನ ಮಾಡಬೇಕಾದುದು ಆವಶ್ಯಕವಾಗಿದೆ. ಅದೇ ರೀತಿ ಕೆಲವು ಮಹಿಳೆಯರು ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ಕೋಪಗೊಳ್ಳುವವರಾಗಿರುತ್ತಾರೆ. ಅವರು ತಮ್ಮ ಮಕ್ಕಳನ್ನು ಉತ್ತಮ ತರಬೇತಿಗೆ ಒಳಪಡಿಸಲು ತಮ್ಮ ಸ್ವಭಾವ ಗುಣಗಳನ್ನು ಬದಲಾವಣೆ ಮಾಡುವುದು ಆವಶ್ಯಕವಾಗಿದೆ. ಈ ರಮಝಾನ್‌ನಲ್ಲಿ ನಮ್ಮ ಮನೆಗಳನ್ನು ಅನುಗ್ರಹಗಳಿಂದ ಆಲಂಕರಿಸಬೇಕು ಎಂಬ ನಿರ್ಧಾರದಿಂದ ವರ್ತಿಸಿರಿ. ನಾವು ತಖ್ವದಲ್ಲಿ ವರ್ಧನೆ ಗಳಿಸಬೇಕು. ನಾವು ತೋರಿಕೆ, ದುರಹಂಕಾರ ಮತ್ತು ಬಡಾಯಿ ಕೊಚ್ಚುವುದರಿಂದ ದೂರ ಸರಿಯಬೇಕು. ಅಲ್ಲಾಹನು ನಮ್ಮ ಮೇಲೆ ಎಷ್ಟೆಲ್ಲಾ ಅನುಗ್ರಹಗಳನ್ನು ಸುರಿಯುತ್ತಿದ್ದಾನೆ. ನಾವು ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ಅಲ್ಲಾಹನ ಸಂಪ್ರೀತಿ ಗಳಿಸುವ ಮಾರ್ಗಗಳನ್ನು ಹುಡುಕಲು ಪ್ರಯತ್ನ ಮಾಡುತ್ತಾ ಇರಬೇಕಾಗಿದೆ.

ಅಲ್ಲಾಹನು ನಮಗೆ ದಯಪಾಲಿಸಿದ ಈ ಮರ್‌ಕಝ್ ಅದರ ಮುಖ್ಯ ಉದ್ದೇಶ ಧರ್ಮದ ಆವಶ್ಯಕತೆಗಳಿಗೋಸ್ಕರ ಬಳಸುವುದಾಗಿದೆ. ಆದರೆ ಲೌಕಿಕವಾಗಿಯೂ ಇದು ಅಲ್ಲಾಹನ ಬಹಳ ದೊಡ್ಡದಾದೊಂದು ಅನುಗ್ರಹವಾಗಿದೆ. ಈ ಮರ್‌ಕಝ್ ಮೂಲಕ ಅಲ್ಲಾಹನು ನಮ್ಮ ಧಾರ್ಮಿಕವಾದ ಮತ್ತು ಲೌಕಿಕವಾದ ಎರಡು ಅನುಗ್ರಹಗಳನ್ನು ನೀಡಿದ್ದಾನೆ. ಆದುದರಿಂದ ನಾವು ಪ್ರತಿಯೊಂದು ಪಾರ್ಶ್ವವನ್ನು ಗಮನಿಸಿ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕಾಗಿದೆ. ಅಲ್ಲಾಹನು ತನ್ನ ಅನುಗ್ರಹದಿಂದ ನಮಗೆ ಒಂದು ಪ್ರದೇಶವನ್ನು ಜನನಿಬಿಡವನ್ನಾಗಿ ಮಾಡಲು ಭಾಗ್ಯ ನೀಡಿದನು. ಇದು ಒಂದು ಚಿಕ್ಕ ಪ್ರದೇಶವಾಗಿದ್ದರೂ ಅದು ಮರ್‌ಕಝ್ ಆಗಿರುವುದರಿಂದ ಅದರ ಮಹತ್ವ ಹಿರಿದಾಗಿದೆ. ತೌಹೀದ್ ರಹಿತವಾದ ಮತ್ತು ಶಿರ್ಕ್‌ನಿಂದ ಭರಿತವಾಗಿರುವ ಈ ಪ್ರದೇಶದಲ್ಲಿ ನಮ್ಮ ಮರ್‌ಕಝ್ ಸ್ಥಾಪಿಸಲು ಅಲ್ಲಾಹನು ನಮಗೆ ಭಾಗ್ಯ ನೀಡಿದನು. ಇಲ್ಲಿಂದ ಒಂದು ಹೊಸ ದೃಢ ನಿರ್ಧಾರದೊಂದಿಗೆ ತೌಹೀದನ್ನು ಹಾಡುವ ಕೆಲಸ ಮಾಡಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ದಾಸನ ಆಗಮನೋದ್ದೇಶವನ್ನು ಈಡೇರಿಸಿರಿ. ಹಾಗೆ ಊರುಗಳ ನಂತರ ಊರುಗಳು ನಗರಗಳ ನಂತರ ನಗರಗಳು ಅಲ್ಲಾಹನ ತೌಹೀದನ್ನು ಪ್ರಕಟಿಸುವವರಾಗುವ ದಿನಗಳು ಆಗಮಿಸಲಿ. ಈಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಮನಬಂದಂತೆ ಆಕ್ಷೇಪಿಸುವವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತಾಕೆಯ ಅಡಿಯಲ್ಲಿ ನಿಲ್ಲಲು ಅಭಿಮಾನ ಹೊಂದುವವರಾಗಲಿ. ಅವರು ಆ ಪ್ರವಾದಿಯ ಮೇಲೆ ದುರೂದ್ ಪ್ರಾರ್ಥನೆ ಅರ್ಪಿಸುವವರಾಗಲಿ.

ಪ್ರತಿಯೊಬ್ಬ ಅಹ್ಮದಿ ದುಆಗಳ ಮೂಲಕ ಹಾಗೂ ತಮ್ಮ ಜೀವನ ಮಾದರಿ ಮೂಲಕ ಕಾಲಘಟ್ಟದ ಖಲೀಫರಿಗೆ ಸಹಾಯ ಮಾಡಬೇಕಾಗಿದೆ. ಈ ಅನುಗ್ರಹೀತ ಮಾಸದಲ್ಲಿ ಇದರ ಉದ್ಘಾಟನೆಯ ಭಾಗ್ಯವನ್ನು ಅಲ್ಲಾಹನು ನಮಗೆ ನೀಡಿದ್ದಾನೆ. ಹಿಂದಿನ ಖಲೀಫರ ಬಗ್ಗೆ ನನಗೆ ತಿಳಿದಿಲ್ಲ, ನನ್ನ ಖಿಲಾಫತ್ ಕಾಲದಲ್ಲಂತೂ ರಮಝಾನ್ ತಿಂಗಳಲ್ಲಿ ಮಸ್‌ಜಿದ್ ಉದ್ಘಾಟನೆಗೊಳ್ಳುವುದು ಇದು ಮೊದಲನೆಯ ಸಲವಾಗಿದೆ. ಆದುದರಿಂದ ಅನುಗ್ರಹ ಭರಿತವಾದ ಈ ತಿಂಗಳಲ್ಲಿ ಅದರ ಸದುಪಯೋಗ ಪಡೆದುಕೊಂಡು ಅಹ್ಮದಿಯತ್ತಿನ ಅಭಿವೃದ್ಧಿಗೋಸ್ಕರ ಮತ್ತು ಲೋಕದ ಈ ಭಾಗದಲ್ಲಿ ಮರ್‌ಕಝ್ ನಿರ್ಮಾಣದ ಉದ್ದೇಶ ಈಡೇರುವಂತೆ ಮಾಡಲು

ಪ್ರಾರ್ಥಿಸಿರಿ. ಬಹಳ ಹೆಚ್ಚು ಹೆಚ್ಚಾಗಿ ಪ್ರಾರ್ಥಿಸಿರಿ. ಈ ಮರ್‌ಕಝ್‌ನಲ್ಲಿ ಸಹ ವೈಶಾಲ್ಯತೆ ಉಂಟಾಗುತ್ತಿರಲಿ. ಇದರ ಸುತ್ತುಮುತ್ತಲೂ ಅಹ್ಮದಿಯರ ವಾಸಸ್ಥಳಗಳೂ ವರ್ಧಿಸುತ್ತಾ ಇರಲಿ. ಜನರು ಇಸ್ಲಾಮಿಗೆ ಪ್ರವೇಶಿಸುವುದರ ದೃಶ್ಯಗಳನ್ನು ನಾವು ಕಾಣುವಂತಾಗಲಿ. ಎಲ್ಲ ಶತ್ರುಗಳ ಯೋಜನೆಗಳು ಪುಡಿಪುಡಿಯಾಗುವುದನ್ನು ನಾವು ಕಾಣುವಂತಾಗಲಿ. ರಬ್ವಕ್ಕೆ ಹೋಗಲು ಮಾರ್ಗ ತೆರೆಯಲ್ಪಡಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ರಾಜಧಾನಿಯಾಗಿರುವ ಖಾದಿಯಾನಿಗೆ ಮರಳುವ ಮಾರ್ಗಗಳೂ ತೆರೆಯಲ್ಪಡಲಿ. ಮಕ್ಕ ಮತ್ತು ಮದೀನಗಳಿಗೆ ಹೋಗಲು ನಮ್ಮ ಮಾರ್ಗಗಳು ಸಹ ತೆರೆಯಲ್ಪಡಲಿ. ಅವು ನಮ್ಮ ಯಜಮಾನರಾದ ಮತ್ತು ನಾವು ಅನುಸರಿಸುತ್ತಿರುವ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪಟ್ಟಣಗಳಾಗಿವೆ. ಅವು ಇಸ್ಲಾಮಿನ ಶಾಶ್ವತ ಕೇಂದ್ರಗಳಾಗಿವೆ. ನೈಜ ಇಸ್ಲಾಮಿನ ಸಂದೇಶ ಅಲ್ಲಿನ ಜನರಿಗೂ ತಲಪಲಿ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ದಾಸನನ್ನು ಅಂಗೀಕರಿಸುವವರಾಗಲಿ. ಅಜ್ಞಾನದ ಕಾರಣದಿಂದ ದ್ವೇಷವನ್ನು ಹೊಂದಿರುವವರ ಕಣ್ಣುಗಳನ್ನು ಅಲ್ಲಾಹನು ತೆರೆಯಲಿ. ಯಾರು ಉದ್ಧಟರಾಗಿ, ತಮ್ಮ ಸ್ವಾರ್ಥ ಸಾಧನೆಗೋಸ್ಕರ ಮುಸ್ಲಿಮ್ ಜನಸಾಮಾನ್ಯರ ಹೃದಯಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಮತ್ತು ಅವರ ಜಮಾಅತಿನ ವಿರುದ್ಧ ದ್ವೇಷದಿಂದ ತುಂಬಿಸುತ್ತಿದ್ದಾರೋ ಆ ಜನರನ್ನು ಹಿಡಿಗೂಡಲು ಅಲ್ಲಾಹನು ವ್ಯವಸ್ಥೆ ಮಾಡಲಿ. ಮುಸ್ಲಿಮರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೈಯಲ್ಲಿ ಒಗ್ಗೂಡಿ ಏಕ ಸಮುದಾಯವಾಗಿ ಇಸ್ಲಾಮಿನ ನೈಜ ತತ್ವಗಳ ಮಾದರಿಗಳಾಗುವಂತೆ ಆಗಲಿ. ಬೇಗ ಬೇಗನೆ ಮುಸ್ಲಿಮೇತರ ಲೋಕ ಸಹ ಇಸ್ಲಾಮಿನ ಪತಾಕೆಯ ಅಡಿಯಲ್ಲಿ ಬರುವಂತಾಗಲಿ.

(ಈ ಮಸ್‌ಜಿದ್ ನಿರ್ಮಾಣಕ್ಕೆ ಸಂಬಂಧಿಸಿ ಕೆಲವು ಮಾಹಿತಿಗಳನ್ನು ನೀಡುತ್ತಾ ಹುಝೂರ್ ಹೇಳಿದರು:) ಅಲ್ಲಾಹನ ಅನುಗ್ರಹದಿಂದ ಈ ಮಸ್‌ಜಿದ್ ಮತ್ತು ಅದರೊಂದಿಗೆ ತಾಗಿಕೊಂಡಿರುವ ಹಾಲ್‌ನಲ್ಲಿ ಎರಡು ಸಾವಿರಕ್ಕಿಂತ ಹೆಚ್ಚು ಜನರು ನಮಾಝ್ ನಿರ್ವಹಿಸಬಹುದಾಗಿದೆ. ಈ ಮಸ್‌ಜಿದ್ ನಿರ್ಮಾಣಕ್ಕೋಸ್ಕರ ಪ್ರತ್ಯೇಕವಾಗಿ ಧನ ಸಂಗ್ರಹಿಸುವ ಕೋರಿಕೆ ನೀಡಿಲ್ಲ. ಈ ಮಸ್‌ಜಿದ್ ನಿರ್ಮಾಣ ಮತ್ತು ಡೆಕೋರೇಶನ್‌ಗೋಸ್ಕರ ಸೇವೆ ಸಲ್ಲಿಸಿದವರಿಗೂ ಅಲ್ಲಾಹನು ಉತ್ತಮ ಪ್ರತಿಫಲ ನೀಡಲಿ.

ಈ ಮಸ್‌ಜಿದ್ ನಿರ್ಮಾಣಕ್ಕೋಸ್ಕರ ಪ್ರತ್ಯೇಕ ಕೋರಿಕೆ ಪ್ರಕಟಿಸಿಲ್ಲ. ಆದರೆ ಇದು ಬಹಳ ದೊಡ್ಡ ಯೋಜನೆಯಾಗಿತ್ತು. ಇದರೊಂದಿಗೆ ಬೇರೆ ದೇಶಗಳಲ್ಲಿಯೂ ದೊಡ್ಡ ಯೋಜನೆಗಳು ಜಾರಿಯಲ್ಲಿವೆ. ಕೆಲವು ಸಾರಿ ಯಾವುದಾದರೂ ಯೋಜನೆ ನಿಲ್ಲಿಸಬೇಕಾಗುತ್ತದೆಯೋ ಎಂದು ನನಗೆ ಚಿಂತೆ ತಲೆದೋರುತ್ತಿತ್ತು. ಆದರೆ ಅಲ್ಲಾಹನು ತನ್ನ ಅನುಗ್ರಹ ನೀಡುತ್ತಿದ್ದನು. ಎಲ್ಲ ಯೋಜನೆಗಳು ಪೂರ್ಣವಾಗುತ್ತಾ ಮುಂದುವರಿದುವು. ನಾವು ಯಾವಾಗಲೂ ಅಲ್ಲಾಹನ ಅನುಗ್ರಹವನ್ನು ಬೇಡುತ್ತಾ ಇದ್ದರೆ ಅವನು ದಯಪಾಲಿಸುತ್ತಾ ಇರುವನು. ಅಂತಹ ಭಾಗ್ಯವನ್ನು ಅಲ್ಲಾಹನು ದಯಪಾಲಿಸುತ್ತಾ ಇರಲಿ.

ಅಲ್ಲಾಹನು ಜಮಾಅತಿಗೆ ಆರ್ಥಿಕ ಬಲಿದಾನ ನೀಡುವ ಶಕ್ತಿಯನ್ನು ದಯಪಾಲಿಸಿದ್ದಾನೆ. ಈ ಬಲಿದಾನಗಳ ಮೂಲಕ ಎಲ್ಲಾ ಯೋಜನೆಗಳು ಪೂರ್ಣಗೊಳ್ಳುತ್ತಾ ಇವೆ. ಇನ್ನು ಮುಂದೆ ಸಹ ಹೀಗೆ ಪೂರ್ಣವಾಗುವುವು – ಇನ್‌ಶಾಅಲ್ಲಾಹ್. ಅಲ್ಲಾಹನು ಜಮಾಅತಿನ ಜನರ ಸಾಂಪತ್ತಿಕ ಶಕ್ತಿಯನ್ನು ವರ್ಧಿಸುತ್ತಾ ಇರಲಿ. ಅವರ ಸಂಪತ್ತಿನಲ್ಲೂ ಜನಸಂಖ್ಯೆಯಲ್ಲೂ ವರ್ಧನೆ ಉಂಟಾಗಲಿ. ಈ ಯೋಜನೆ ಪ್ರತ್ಯೇಕವಾದ ಆರ್ಥಿಕ ತ್ಯಾಗದ ಕೋರಿಕೆ ಇಲ್ಲದೆ ಪೂರ್ಣವಾದುದು ಜಮಾಅತಿನ ಸಾಮಾನ್ಯ ಬಜೆಟಿನ ಕಾರಣದಿಂದಾಗಿದೆ. ಆದುದರಿಂದ ಲೋಕದ ಎಲ್ಲಾ ಜಮಾಅತ್‌ಗಳು ಈ ಯೋಜನೆಯಲ್ಲಿ ಪಾಲುಗಾರರಾಗಿವೆ. ಯಾವ ಜಮಾಅತ್ ಹೆಚ್ಚಿಗೆ ನೀಡಿದೆ ಯಾವ ಜಮಾಅತ್ ಕಡಿಮೆ ನೀಡಿದೆ ಎಂಬ ವ್ಯತ್ಯಾಸವಿಲ್ಲ. ಅಲ್ಲಾಹನು ಎಲ್ಲರಿಗೂ ಅತ್ಯುತ್ತಮ ಪ್ರತಿಫಲ ನೀಡಲಿ. ಅವರ ಸಂಪತ್ತಿನಲ್ಲೂ ಸಂತಾನಗಳಲ್ಲೂ ಅನುಗ್ರಹ ನೀಡಲಿ – ಆಮೀನ್.

——————*****——————

***Friday Sermon delivered by Hadrath Khaleefatul Masih Al Khamis*** *(atba)*

*At,Masjid Mubarak, Islamabad, UK. On 17-05-2019.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim |***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon